



**ಇನ್‌ಸೆಪ್ಶನ್** (2010)

ಈ ಚಿತ್ರದ ನಾಯಕ ಬೇರೆಯವರ ಮೆದುಳೊಳಗೆ ಹೊಕ್ಕು ಅವರ ವಿಚಾರಗಳನ್ನು ಕದಿಯಬಲ್ಲ ಸಾಮರ್ಥ್ಯ ಹೊಂದಿದವ. ಬೇರೆಯವರ ಕನಸನ್ನು ಕೂಡಾ ತನ್ನ ಇಚ್ಛೆಗೆ ತಕ್ಕಂತೆ ಬದಲಾಯಿಸಬಲ್ಲ ಆತ. ಸಿನಿಮಾದ ಖಳನಾಯಕ ಈ ನಾಯಕನಿಗೆ ಆಮಿಷ ಒಡ್ಡಿ, ಮೂರನೇ ವ್ಯಕ್ತಿಯೊಬ್ಬನ ಮೆದುಳಲ್ಲಿ ಅಪಾಯಕಾರಿ ಆಲೋಚನೆಯೊಂದನ್ನು ಬಿತ್ತುವ ಕೆಲಸಕ್ಕೆ ಒಪ್ಪಿಸಿಬಿಡುತ್ತಾನೆ. ಅಲ್ಲಿಂದ ಸಿನಿಮಾ ಹಲವು ರೋಚಕ ತಿರುವುಗಳನ್ನು ಪಡೆದುಕೊಳ್ಳುತ್ತದೆ.

**ರೆಡಿ ಪ್ಲೇಯರ್ ವನ್** (2018)

2045 ಇಸವಿಯ ಹೊತ್ತಿಗೆ ಜಗತ್ತು ಕಂಡ ಹವಾಮಾನ ಬದಲಾವಣೆ, ಪ್ರಕೃತಿ ನಾಶ, ಯುದ್ಧ ಇತ್ಯಾದಿಗಳಿಂದ ಜನ ಜರ್ಜರಿತರಾಗಿ ಹೋಗಿರುತ್ತಾರೆ. ಬಡತನ, ಹಸಿವು, ನಿರಾಶೆಯಿಂದ ರೋಸಿ ಹೋದ ಜನರಿಗೆ ಸಂತಸ ನೀಡಬಲ್ಲ ಒಂದೇ ಒಂದು ತಾಣವೆಂದರೆ 'ಒಯಸಿಸ್'. ಅದೊಂದು ವರ್ಚುವಲ್ ಜಗತ್ತು. ಆ ಜಗತ್ತಿನಲ್ಲಿ ಇಲ್ಲದ ವಸ್ತುಗಳಿಲ್ಲ, ದೊರಕದ ಸೌಲಭ್ಯಗಳಿಲ್ಲ. ಹೆಚ್ಚುಕಮ್ಮಿ ಅಷ್ಟೂ ಜನರ ಹತ್ತಿರ 'ಒಯಸಿನ್'ನ ಅಕೌಂಟ್ ಇದೆ, ಹೆಚ್ಚಿನ ಸಮಯ ಅವರು ಅಲ್ಲೇ ಕಳೆಯುತ್ತಾರೆ. ಈ 'ಒಯಸಿಸ್'ನ ಮಾಲೀಕತ್ವ ಹೊಂದಿರುವ ಕಾರ್ಪೊರೇಟ್ ಸಂಸ್ಥೆ, ತನ್ನ ಗ್ರಾಹಕರನ್ನು ಮನರಂಜಿಸಲು ಸ್ಪರ್ಧೆಯೊಂದನ್ನು ಏರ್ಪಡಿಸುತ್ತದೆ. ಅಲ್ಲಿಂದ ಸಿನಿಮಾದ ಕತೆ ಅನಾವರಣಗೊಳ್ಳುತ್ತಾ ಸಾಗುತ್ತದೆ.




**ಮೈನಾರಿಟಿ ರಿಪೋರ್ಟ್**(2002)

2025ನೇ ಇಸವಿಯಲ್ಲಿ ಜರಗಬಹುದಾದ ಕಥೆ. ಪೊಲೀಸ್ ಅಧಿಕಾರಿಯೊಬ್ಬನ ಮೆದುಳಲ್ಲಿ ಸಾಫ್ಟ್‌ವೇರ್ ಒಂದನ್ನು ಹುದುಗಿಸಿಡಲಾಗಿದೆ. ಆದರಿಂದಾಗಿ ಆತ ಮುಂದೆಂದೋ ನಡೆಯಬಹುದಾದ ಅಪರಾಧವನ್ನು ಇಂದೇ ಕಾಣಬಲ್ಲ. ಅದನ್ನು ತಡೆಯಲು ಆತ ಮೊದಲಿಂದಲೇ ಎಲ್ಲ ತಯಾರಿ, ಪ್ರಯತ್ನ ಮಾಡಿಕೊಳ್ಳಬಲ್ಲ.

ಮೆಟಾವರ್ಸಿನ ಸಾಧ್ಯತೆ ಬಾಧ್ಯತೆಗಳ ಕುರಿತು ನನ್ನ ಗೆಳೆಯನೊಬ್ಬನಲ್ಲಿ ಚರ್ಚಿಸುತ್ತಿದ್ದೆ. 'ನಾನು ಸತ್ತರೂ ಸರಿಯೇ, ಈ ವರ್ಚುವಲ್ ಲೋಕದಲ್ಲಿ ಸಮಯ ಕಳೆಯಲಾರೆ' ಎಂದ ಆತ. 'ಅದೇನೋ ಸರಿ. ಆದರೆ ನಿನ್ನ ಮಗಳಿಗೆ ಹೀಗೇ ಅನ್ನಿಸಬಹುದಾ? ಮನೆಗೆ ಬರುತ್ತಲೇ, ಹೋಮ್‌ವರ್ಕ್ ಮಾಡಿದೆಯಾ ಎಂದು ಕೇಳುವ ಅಪ್ಪನಿಗಿಂತ, ಕೈ ಸನ್ನೆ ಮಾಡಿದೊಡನೆ ಐಸ್ ಕ್ರೀಮ್ ತಂದುಕೊಡುವ 'ಮೆಟಾಲೋಕ'ದ ಅಪ್ಪನೇ ಆಕೆಗೆ ಇಷ್ಟವಾಗಬಹುದಲ್ಲ? ಆ ಅಪ್ಪನೊಡನೆಯೇ ಸಮಯ ವ್ಯಯಿಸಲು ಆಕೆ ಬಯಸಿದರೆ?' ಎನ್ನುವ ನನ್ನ ಪ್ರಶ್ನೆಗೆ ಆತನಲ್ಲಿ ಉತ್ತರವಿಲ್ಲ.

'ಹೌದು ಮಾರಾಯಾ. ಅಪ್ಪ ಕೆಲಸದಿಂದ ಬೇಗ ಮನೆಗೆ ಬರಲಿ ಎಂದು ಮಕ್ಕಳು ಬಯಸುವ ಸ್ಥಿತಿ ಇಂದು ಅಷ್ಟಿಷ್ಟಾದರೂ ಇದೆ. ಇವೆಲ್ಲ ಬಂದಮೇಲೆ ನಮ್ಮ ಕೌಟುಂಬಿಕ ವ್ಯವಸ್ಥೆ, ನಂಬಿಕೆಗಳು ಅದ್ಯಾವ್ಯಾವ ಬದಲಾವಣೆಗಳನ್ನು ಪಡೆಯುತ್ತೆ ಹೇಳಲಾಗುವುದಿಲ್ಲ' ಎನ್ನುವ ಅವನ ಮಾತಿನಲ್ಲಿ ಆತಂಕವಿತ್ತು.

'ಅಷ್ಟೇನೂ ಚಿಂತಿಸಬೇಡ. ಟೀವಿಯಿಂದ ಶುರುಗೊಂಡು, ಮೊಬೈಲು, ಇಂಟರ್ನೆಟ್ ಇವೆಲ್ಲ ಹಂತ ಹಂತವಾಗಿ ನಮ್ಮನ್ನು ಅದಕ್ಕೆ ಸಿದ್ಧಗೊಳಿಸುತ್ತಿವೆ. ಒಮ್ಮೆಲೇ ಅದು ನಮ್ಮ ಮೇಲೆ ಎರಗುವುದಿಲ್ಲ. ಹಾಗೂ ಆ ಬದಲಾವಣೆಗೆ ನಮ್ಮ ಕೊಡುಗೆಯೂ ಸಾಕಷ್ಟು ಇರಲಿದೆ ಅಲ್ಲವೇ?'

'ನೀನು ಹೇಳುವುದೂ ಸರಿ ಇದೆ. ನನ್ನ ಸಂಬಂಧಿಯೊಬ್ಬರಿದ್ದಾರೆ. ವಯಸ್ಸು ಎಪ್ಪತ್ತರ ಆಸುಪಾಸು. ಅವರ ಒಬ್ಬ ಮಗ ಅಮೆರಿಕದಲ್ಲೂ, ಇನ್ನೊಬ್ಬ ಇಲ್ಲೇ ಜೊತೆಯಲ್ಲಿ ಇದ್ದಾನೆ. ಅಮೆರಿಕದ ಮಗ ದಿನಾ ಬೆಳಿಗ್ಗೆ ವಿಡಿಯೊ ಕಾಲ್ ಮಾಡಿ ಇವತ್ತು ಶುಗರ್ ಎಷ್ಟಿದೆ ಎಂದು ಕೇಳುತ್ತಾನೆ ಎಂದು ಹೇಳುವಾಗ ಹೆಮ್ಮೆಪಡುತ್ತಾರೆ. ಅದೇ ಮನೆಯಲ್ಲಿರುವ ಮಗ ಹೊರ ಹೋಗುವಾಗ ಕೊಡೆ ಮರೆತೆನೆನ್ನುವ ಸಣ್ಣ ವಿಷಯಕ್ಕೂ ಗದರುತ್ತಾನೆ ಎಂದು ಅಸಮಾಧಾನ ಪಡುತ್ತಾರೆ. ಭೌತಿಕ ಸ್ಪರ್ಶಕ್ಕಿಂತ ವರ್ಚುವಲ್ ರಿಯಾಲಿಟಿಯ ಮೋಡಿಗೆ ನಾವು ಹೇಗೆ ವಾಲುತ್ತಿದ್ದೇವೆ ಎಂಬುದಕ್ಕೆ ಇದೇ ಸಾಕ್ಷಿ ಸಾಕಲ್ಲ?'

'ಇನ್ನೂ ಒಂದು ಸಂಗತಿ ಯೋಚಿಸಿದ್ದೀಯಾ? ಇವತ್ತಿನ ನಮ್ಮ ಹಲವು ಸಮಸ್ಯೆಗಳು, ಕ್ಷೋಭೆಗೆ ಕಾರಣ, ಕೂಡುಕುಟುಂಬ ಪದ್ಧತಿಯಿಂದ ವಿಮುಖರಾಗಿ ನಾವು ವಿಘಟಿತ ಕುಟುಂಬ ಪದ್ಧತಿಗೆ ಒಡ್ಡಿಕೊಂಡಿರುವುದೇ ಆಗಿದೆ ಎಂಬುದು ನನ್ನ ನಂಬಿಕೆ. ಇನ್ನೂ ಮುಂದುವರಿದು, ನಾವು ವರ್ಚುವಲ್ ಸಂಬಂಧಗಳನ್ನು ಹೆಚ್ಚೆಚ್ಚು ನೆಚ್ಚತೊಡಗಿದರೆ ಏನಾಗಬಹುದು? ಎಲ್ಲೆಲ್ಲೋ ಇರುವವರನ್ನು ಹತ್ತಿರ ತರುತ್ತೇವೆ ಅನ್ನುತ್ತಾರಲ್ಲ; ಇದು ನಿಜ ಅರ್ಥದಲ್ಲಿ ಕೂಡಿಸುವುದೋ ಅಥವಾ ದೂರ ಮಾಡುವುದೋ?' ಎಂದೆ ನಾನು.

ಆತ ಉತ್ತರಿಸಲಿಲ್ಲ, ಮುಗುಳ್ನಕ್ಕ.

***

'ದತ್ತಾಂಶ ಸಂಗ್ರಹ' ಎನ್ನುವ ಮುಖ್ಯ ಮುದ್ದೆಯನ್ನೊಮ್ಮೆ ಅವಲೋಕಿಸೋಣ. ನಮ್ಮ ಅಸ್ಮಿತೆಯ ಪ್ರತೀಕವಾಗಿರುವ ಬೆರಳಚ್ಚನ್ನೇ ನಾವು